ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 19–08–2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಡಿ. ದೇವರಾಜ ಅರಸು ಅವರ 101ನೇ ಜನ್ಮ ದಿನಾಚರಣೆ ಮತ್ತು ಜನ್ಮ ಶತಮಾನೋತ್ಸವ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ.<br><br>ಮಾಲಾರ್ಪಣೆ:<br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು | 20–08–2016<br>ಶನಿವಾರ<br>ಬೆಳಿಗ್ಗೆ<br>10–40 ಗಂಟೆಗೆ | ಡಿ. ದೇವರಾಜ ಅರಸು ಅವರ ಪ್ರತಿಮೆಗೆ, ಪಶ್ಚಿಮದ್ವಾರ, ವಿಧಾನಸೌಧ, ಬೆಂಗಳೂರು |
| 2. | ಡಿ. ದೇವರಾಜ ಅರಸು ಅವರ 101ನೇ ಜನ್ಮ ದಿನಾಚರಣೆ ಮತ್ತು ಜನ್ಮ ಶತಮಾನೋತ್ಸವ ಸಮಾರೋಪ ಸಮಾರಂಭ.<br><br>ಉದ್ಘಾಟನೆ:<br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br><br>ಅಧ್ಯಕ್ಷತೆ:<br><br>ಹೆಚ್. ಆಂಜನೇಯ, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. | 20–08–2016<br>ಶನಿವಾರ<br>ಬೆಳಿಗ್ಗೆ<br>11–00 ಗಂಟೆಗೆ | ಕಂಠೀರವ ಒಳಾಂಗಣ ಕ್ರೀಡಾಂಗಣ, ಬೆಂಗಳೂರು |

| | | | |
|---|---|---|---|
| 3. | ಮನೆಯಂಗಳದಲ್ಲಿ ಮಾತುಕತೆ:<br><br>ತಿಂಗಳ ಅತಿಥಿ:<br><br>ಡಾ. ಹೊ. ಶ್ರೀನಿವಾಸಯ್ಯ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಗಾಂಧೀವಾದಿಗಳು, | **20–08–2016**<br>ಶನಿವಾರ<br>ಸಂಜೆ<br>**4–00** ಗಂಟೆಗೆ | ನಯನ ಸಭಾಂಗಣ,<br>ಕನ್ನಡ ಭವನ,<br>ಜೆ.ಸಿ. ರಸ್ತೆ,<br>ಬೆಂಗಳೂರು. |
| 4 | ಬೆಳ್ಳಿ ಸಿನಿಮಾ – ಬೆಳ್ಳಿ ಮಾತು :<br><br>ಬೆಳ್ಳಿ ಸಿನಿಮಾ – ಕರ್ವ<br><br>ಬೆಳ್ಳಿಮಾತು:<br><br>ನವನೀತ್<br>ಚಿತ್ರದ ನಿರ್ದೇಶಕ<br><br>ಮುಖ್ಯ ಅತಿಥಿಗಳು:<br><br>ಕೆ. ಶಿವರಾಂ,<br>ನಿವೃತ್ತ ಐ.ಎ.ಎಸ್. ಅಧಿಕಾರಿಗಳು<br>ಹಾಗೂ ಚಲನಚಿತ್ರ ನಟ<br><br>ಮಂಜುನಾಥ್,<br>ಚಲನಚಿತ್ರ ನಿರ್ಮಾಪಕರು,<br><br>ಚಲನಚಿತ್ರ ತಾರೆಗಳಾದ<br>ಧರ್ಮ, ಮಾಧುರಿ ಇಟಗಿ,<br>ಭಾವನಾರಾವ್<br><br>ಅಧ್ಯಕ್ಷತೆ:<br><br>ಎಸ್. ವಿ. ರಾಜೇಂದ್ರಸಿಂಗ್ ಬಾಬು,<br>ಅಧ್ಯಕ್ಷರು,<br>ಕನ್ನಡ ಚಲನಚಿತ್ರ ಅಕಾಡೆಮಿ | **20–8–2016**<br><br>ಶನಿವಾರ<br><br>ಸಂಜೆ<br><br>**4–00** ಗಂಟೆಗೆ | ಚಾಮುಂಡೇಶ್ವರಿ ಸ್ಟುಡಿಯೋಸ್ ಮಿಲ್ಲರ್ಸ್ ರಸ್ತೆ,<br><br>ಬೆಂಗಳೂರು |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

# ಈ ವಾರದ ಬೆಳ್ಳಿ ಸಿನಿಮಾ "ಕರ್ವ"

ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಪ್ರತಿ ಶನಿವಾರ ನಡೆಸುವ ಬೆಳ್ಳಿಸಿನಿಮಾ ಬೆಳ್ಳಿಮಾತು ಕಾರ್ಯಕ್ರಮದಲ್ಲಿ ಆಗಸ್ಟ್ 20 ರ ಶನಿವಾರ ಸಂಜೆ 4-00 ಗಂಟೆಗೆ ನಗರದ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಬೆಳ್ಳಿ ಸಿನಿಮಾ " ಕರ್ವ " ಚಲನಚಿತ್ರವನ್ನು ಪ್ರದರ್ಶಿಸಲಾಗುವುದು ಎಂದು ಅಕಾಡೆಮಿ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ತಿಳಿಸಿದ್ದಾರೆ.

ಅಂದು " ಕರ್ವ " ಚಲನಚಿತ್ರ ಪ್ರದರ್ಶನದ ನಂತರ ಚಿತ್ರದ ನಿರ್ದೇಶಕ ನವನೀತ್ ಅವರ ಬೆಳ್ಳಿಮಾತು ಸಂವಾದ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ನಿವೃತ್ತ ಐ.ಎ.ಎಸ್. ಅಧಿಕಾರಿ ಹಾಗೂ ಚಲನಚಿತ್ರ ನಟ ಕೆ. ಶಿವರಾಂ, ಚಲನಚಿತ್ರ ನಿರ್ದೇಶಕ ಮಂಜುನಾಥ್ ಹಾಗೂ ಚಲನಚಿತ್ರ ತಾರೆಗಳಾದ ಧರ್ಮ, ಮಾಧುರಿ ಇಟಗಿ ಹಾಗೂ ಭಾವನಾ ರಾವ್ ಪಾಲ್ಗೊಳ್ಳಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ಅಕಾಡೆಮಿ ಅಧ್ಯಕ್ಷ ಎಸ್. ವಿ. ರಾಜೇಂದ್ರಸಿಂಗ್ ಬಾಬು ವಹಿಸುವರು ಎಂದು ಅವರು ತಿಳಿಸಿದ್ದಾರೆ.

ಬಾಬು::ಕೆಎಂ

# ಸಾಲ ತೀರುವಳಿ ಯೋಜನೆ

ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)

ಭಾರತ ಸರ್ಕಾರವು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಿಂದ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮುಖಾಂತರ ಸಮೂಹ ಬ್ಯಾಂಕ್ ಸಾಲ ಯೋಜನೆಯನ್ವಯ ವಿವಿಧ ಕೈಗಾರಿಕೆಗಳ ಅಭಿವೃದ್ಧಿಗಾಗಿ ಹಾಗೂ ಸ್ವಉದ್ಯೋಗ ಸೃಷ್ಟಿಗಾಗಿ 1995 ರಿಂದ 2000 ಇಸವಿಯವರೆಗೆ ನೀಡಿದ ಸಾಲದ ವಸೂಲಾತಿಗಾಗಿ ಕರ್ನಾಟಕ ಸರ್ಕಾರವು "ಒಂದಾವರ್ತಿ ಸಾಲ ತೀರುವಳಿ ಯೋಜನೆ" ಯನ್ನು 2014-15 ರಿಂದ ಜಾರಿಗೆ ತಂದಿದೆ ಹಾಗೂ ಮಾರ್ಚ್ 31, 2017 ರವರೆಗೆ ಈ ಯೋಜನೆ ಚಾಲ್ತಿಯಲ್ಲಿರುತ್ತದೆ. ಈ ಯೋಜನೆಯನ್ವಯ ಸಾಲ ಪಡೆದ ಸಂಘ/ಸಂಸ್ಥೆ/ಉದ್ದಿಮೆದಾರರು ಅಸಲನ್ನು ಪಾವತಿಸಿದ್ದಲ್ಲಿ ಬಡ್ಡಿಯನ್ನು ಮನ್ನಾ ಮಾಡಲಾಗುವುದು.

ಆದುದರಿಂದ ಸರ್ಕಾರದ ಈ ಯೋಜನೆಯನ್ನು ಸಮೂಹ ಬ್ಯಾಂಕ್ ಸಾಲ ಯೋಜನೆಯನ್ವಯ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಸಾಲ ಪಡೆದ ರಾಜ್ಯದ ಸಂಘ/ಸಂಸ್ಥೆ/ಉದ್ದಿಮೆದಾರರು ಅಸಲನ್ನು ಕೂಡಲೇ ಪಾವತಿಸಿ ಬಡ್ಡಿಮನ್ನಾ ಯೋಜನೆಯ ಸವಲತ್ತು ಉಪಯೋಗಿಸಿಕೊಳ್ಳಬಹುದಾಗಿದೆ.

ಬಾಬು:ಜಿಪಿಆರ್